ನಿರ್ಮಿಸಬೇಕಾಗುತ್ತದೆ. ಅದಕ್ಕೆ ಅನುಭವವಿರುವವರನ್ನು ನೋಡಿ ಹಾಕುತ್ತೇವೆ.

ಶ್ರೀ ಟಿ. ಹನುಮಯ್ಯನವರು.—ಹಾಗಾದರೆ ಗ್ರಾಜುಯೇಟ್ ಇಕ್ಸ್‌ಪೆರ್ಟಿಗೆ ಅನುಭವ ಜಾಸ್ತಿ, ಗ್ರಾಜುಯೇಟ್ ಅಲ್ಲದವರಿಗೆ ಅನುಭವ ಕಡಮೆ ಎಂದು ಭಾವಿಸಬಹುದೆ?

ಶ್ರೀ ಟಿ. ಮರಿಯಪ್ಪನವರು.—ಗ್ರಾಜುಯೇಟುಗಳಿಗೆ ಜ್ಞಾನ ಮತ್ತು ಅನುಭವ ಇರುತ್ತದೆ. ಗ್ರಾಜುಯೇಟುಗಳಲ್ಲದವರಿಗೆ ಅಷ್ಟು ಓದದಿರುವುದರಿಂದ ಜ್ಞಾನಾನುಭವ ಕಡಿಮೆ.

ಶ್ರೀ ಟಿ. ಹನುಮಯ್ಯನವರು.—ಹಾಗಾದರೆ, ಓದಿದ ಮಾತ್ರಕ್ಕೇ ಜ್ಞಾನ ಕೆಚ್ಚಾಗಿದೆಯೆಂದು ಹೇಳಬಹುದೆ?

ಶ್ರೀ ಟಿ. ಮರಿಯಪ್ಪನವರು.—ನಾನು ಹಾಗೆ ಹೇಳಲಿಲ್ಲ. ಹೀಗೆ ಪ್ರಶ್ನೆ ಮಾಡುವುದು ಕ್ವಾಸ್ ಎಕ್ಸಾಮಿನೇಷನ್ ಆಗುತ್ತದೆ.

ಶ್ರೀ ಟಿ. ಹನುಮಯ್ಯನವರು.—ಈ ಕಾಲದಲ್ಲಿ ಆಹಾರಾಭಾವ ಜಾಸ್ತಿ ಇರುವುದರಿಂದ ಇಕ್ಸ್‌ಪೆರ್ಟ್‌ಗಳವರ ಕೆಲಸ ಜಾಸ್ತಿಯೆಂಬುದನ್ನು ಒಪ್ಪುತ್ತೀರಾ?

Mr. SPEAKER.—That question does not arise. Next question. Question No. 39.

Starting of Dairy Farms

*Q.—39. Sri B. HUTCHE GOWDA (Tumkur District—General).—Will the Government be pleased to state.—

(*a*) the amount sanctioned by them as grant or as subsidy for starting dairy farms in the State during the previous three years;

(*b*) the names and addresses of the parties, the amount sanctioned to each and the terms and conditions of the grant relating to each;

(*c*) the names of the parties whose applications are rejected and the reasons for rejecting them;

(*d*) the names of parties whose applications are pending and the dates of their pending applications?

A.—Sri T. MARIAPPA (Home Minister).—

(*a*) Nil,

(*b*) Does not arise in view of reply to clause (*a*).

(*c*) Sri B. S. Aswatha Murthy, C/o B. S. Doraswamy, Bangalore. For the reason that there is no provision.

(*d*) Nil.

ಶ್ರೀ ಬಿ. ಹುಚ್ಚೇಗೌಡರು.—(*a*) ಪ್ರಶ್ನೆಗೆ ಉತ್ತರ ಏನಾಗಿ ಸಬ್ಸಿಡಿ ಕೊಟ್ಟಿಲ್ಲವೆಂದು ಹೇಳಿದ್ದೀರಿ. ಹಾಗಾದರೆ ಸಾಲ ಕೊಟ್ಟಿರುವುದೆಷ್ಟು?

*ಶ್ರೀ ಟಿ. ಮರಿಯಪ್ಪನವರು.—ಗ್ರಾಂಟು ಮತ್ತು ಸಬ್ಸಿಡಿ ಕೊಟ್ಟಿಲ್ಲ. ಸಾಲ ಕೊಟ್ಟಿರುವುದು ಎಷ್ಟೆಂದು ಸಳುವುದಕ್ಕೆ ನೋಟೀಸ್ ಬೇಕು.

ಶ್ರೀ ಬಿ. ಹುಚ್ಚೇಗೌಡರು.—ಒಟ್ಟು ಪೊತ್ತವನ್ನಾದರೂ ಹೇಳಬಲ್ಲರಾ?

ಶ್ರೀ ಟಿ. ಮರಿಯಪ್ಪನವರು.—ನೋಟೀಸ್.

ಶ್ರೀ ಎಸ್. ಕರಿಯಪ್ಪನವರು (ಬೆಂಗಳೂರು ಜಿಲ್ಲೆ).—ಡೈರಿ ಫಾರಂಗೆ ಸಾಲ ಕೊಡಬೇಕೆಂದು ಸರ್ಕಾರದವರು ನಿರ್ಧಾರ ಮಾಡಿದ್ದಾರೆಯೆ?

ಶ್ರೀ ಟಿ. ಮರಿಯಪ್ಪನವರು.—ಯೋಜನೆಯಿದೆ.

ಶ್ರೀ ಎಸ್. ಕರಿಯಪ್ಪನವರು.—ಮುಂಜೂರು ಮಾಡುತ್ತಿಲ್ಲವೆ?

ಶ್ರೀ ಟಿ. ಮರಿಯಪ್ಪನವರು.—ಕೆಲವರಿಗೆ ಕೊಟ್ಟಿದೆ.

ಶ್ರೀ ಎಸ್. ಕರಿಯಪ್ಪನವರು.—ಮುಂದಿನ ವರ್ಷಕ್ಕೆ ಅಲಾಟ್‌ಮೆಂಟ್ ಮಾಡಿದ್ದೀರಾ?

ಶ್ರೀ ಟಿ. ಮರಿಯಪ್ಪನವರು.—ನೋಟೀಸ್. ಬಡ್ಡೆಟ್‌ತಮ್ಮ ಕೈಲೇ ಇದೆ.

ಶ್ರೀ ಎಸ್. ಕರಿಯಪ್ಪನವರು.—ಹಾಗಾದರೆ ಅಲಾಟ್‌ಮೆಂಟ್ ಮಾಡಿ ಎಂದು ನಾನು ಹೇಳುವುದಾದರೆ ಅದನ್ನು ಒಪ್ಪುತ್ತೀರಾ?

(ಉತ್ತರವಿಲ್ಲ.)

Sri H. M. CHANNABASAPPA.—Do the Government grant subsidies for starting dairy farms?

ಶ್ರೀ ಟಿ. ಮರಿಯಪ್ಪನವರು.—ಇಲ್ಲ ಎಂದು ಉತ್ತರ ಕೊಟ್ಟಿದೆ.

Extent of cultivation of paddy and dry crops.

*Q.—54. Sri T. SUBRAMANYA (Tumkur District—General).—

Will the Government be pleased to state:—

(*a*) the number of acres of wet land that was cultivated and paddy grown during the current year;

(*b*) the estimated and actual yield from them;

(*c*) the acreage of dry crop in the current year;

(*d*) the estimated and actual yield?

A.—Sri T. MARIAPPA (Home Minister).—

(*a*) 748,382 acres.

(*b*) Estimated yield is 4,677,422 pallas of paddy. Final estimates are not yet ready.

(*c*) Ragi ... 1,874,604 acres
Jola ... 327,835 ,,
Minor Millets 362,978 ,,

(*d*) Estimated yield is as follows:—

Ragi ... 4,048,697 pallas
Jola ... 478,453 ,,
Minor Millets 382,826 ,,

Final estimates are not yet ready.